ESTD: 1919 ಸ್ಥಾಪನೆ 13(4)

Registered No. M. 4468

ಚಂದಾ ದರ
ಸ್ಥಳೀಯರಿಗೆ
4–8–0
ಪರಸ್ಥಳೀಯರಿಗೆ
6–2–0
ಬಿಡಿ ಸಂಚಿಕೆ:
ಮಂಗಳವಾರ 0–1–6
ಶುಕ್ರವಾರ 0–0–6
ಕಾರ್ಯಾಲಯ
ರಥಬೀದಿ, ಮಂಗಳೂರು

KANNADA KANTEERAVA BI-WEEKLY

ಸಂಪುಟ ೨೮] ಮಂಗಳೂರು, ೧೯೪೬ನೇ ಇಸವಿ ಮೇ ತಾ. ೨೪ನೇ ಶುಕ್ರವಾರ [ಸಂಚಿಕೆ ೧೬
VOL·XXVIII] MANGALORE, FRIDAY 24 MAY, 1946 [NO. 16

Work Executed by Skilled Artists

Oil Paintings
Commercial Drawings
Cinema Slides
Etc. Etc.

Shevgoor Fine Arts
CAR ST. MANGALORE.

ಸಿಮ್ಲಾ ಸಮ್ಮೇಳನ ಮುರಿದು ಬಿದ್ದದ್ದೇಕೆ?

ಮೂರು ಪಂಗಡಗಳೊಳಗಿನ ಪತ್ರವ್ಯವಹಾರ

ಯಾವ ಭಿನ್ನಾಭಿಪ್ರಾಯಗಳ ದೆಸೆಯಿಂದ ಸಿಮ್ಲದ ಸಮ್ಮೇಳನ ವಿಫಲವಾಯಿತೋ ಆ ಭಿನ್ನಾಭಿಪ್ರಾಯಗಳ ಕುರಿತಾದ ಮೂರು ಪಂಗಡಗಳೊಳಗಿನ ಪತ್ರವ್ಯವಹಾರವು ಇದೀಗಲೇ ಪ್ರಕಟವಾಗಿದೆ. ಅದರಲ್ಲಿ ೨೧ ದಾಖಲೆಗಳಿವೆ. ಇದು ೧೪ ಪುಟಗಳಲ್ಲಿ ಅಚ್ಚಾಗಿದೆ.

ಈ ಕಾಗದ ಪತ್ರಗಳಲ್ಲಿ ಬ್ರಿಟಿಶ್ ಮಂತ್ರಿಮಂಡಲಿಯ ನಿಯೋಗಗೋಷ್ಠಿಯವರು ಸ್ಪಂದಕ್ಕೆ ಬರಬೇಕಾದ ಮುಖ್ಯ ವಿಷಯಗಳು ಯಾವುವು ಎಂಬುದನ್ನೂ ಅದಕ್ಕೆ ಸಂಬಂಧಿಸಿದ ತತ್ವಗಳು ಯಾವುವೆಂಬುದನ್ನೂ ಶ್ರುತಪಡಿಸಿದ್ದ ವಿಚಾರವೂ, ಮುಸ್ಲಿಂ ಲೀಗಿನವರು ತಮಗೆ ಬೇಕಾದ ಕನಿಷ್ಠ ಮಿತಿಯ ಕೇಳಿಕೆಗಳು ಯಾವುವು ಎಂಬ ಕುರಿತು ಅವರು ಒಪ್ಪಿಸಿದ ಅದೊಂದು ಮೆಮೊರಾಂಡಮಿನ ವಿಚಾರವೂ, ಅಲ್ಲದೆ ಯಾವ ತಳಹದಿಯ ಮೇಲೆ ಒಪ್ಪಂದವಾಗಬಹುದು ಎಂದು ಕಾಂಗ್ರೆಸಿನವರು ನಿವೇದಿಸಿದ್ದ ವಿಚಾರವೂ ಅಡಕವಾಗಿವೆ.

ಈ ಸಮ್ಮೇಳನ ಮೇ ೫ರಲ್ಲಿ ಆರಂಭವಾಯಿತು. ಮೇ ತಾ ೮ರಲ್ಲಿ ಎ. ಜಿನ್ನಾ ಸಾಹೇಬರು ಭಾರತ ಮಂತ್ರಿಗಳಿಗೊಂದು ಪತ್ರ ಬರೆದು "ಇನ್ನು ಈ ನಿಯೋಗಗೋಷ್ಠಿಯವರಿಂದ ಸೂಚಿಸಲಾದ ವಿಷಯಗಳ ಕುರಿತು ಚರ್ಚಿಸಿ ಫಲವಿಲ್ಲ"ವೆಂದೇ ತಿಳಿಸಿದ್ದರು ಮೇ ತಾ. ೯ರಲ್ಲಿ ರಾಷ್ಟ್ರಪತಿಗಳೂ ಒಂದು ಪತ್ರ ಬರೆದು ಅದರಲ್ಲಿ ನಿಯೋಗಗೋಷ್ಠಿಯವರ ಸೂಚನೆಗಳು ಸ್ವೀಕಾರಕ್ಕೆ ಯೋಗ್ಯವಲ್ಲವೆಂದೂ, ಮಧ್ಯಕಾಲದ ತಾತ್ಕಾಲಿಕ ಸರಕಾರವೊಂದನ್ನು ಸ್ಥಾಪಿಸುವುದೇ ಅಲ್ಲದೆ ಕಾನ್ಸ್‌ಟ್ಯುಯೆಂಟ್ ಎಸೆಂಬ್ಲಿ ವಿಚಾರದಲ್ಲಿ ಏನಾದವೇನಾದರೂ ಬಂದಲ್ಲಿ ಆಗ ಅದನ್ನು ಸ್ವತಂತ್ರವಾದ ಒಂದು ಪಂಚಾಯಿತಿ ಮಂಡಲಿಗೊಪ್ಪಿಸಿಕೊಡಬೇಕೆಂದೂ ತಿಳಿಸಿದ್ದರು.

ಇದಾದ ಬಳಿಕ ಎಂ. ಜಿನ್ನ ಮತ್ತು ಪಂಡಿತ ನೆಹರು ಇವರೊಳಗಿನ ಭೇಟಿ ನಡೆಯಿತು. ಇವರಿವರ ಈ ಎಂಟಿಂಗುಗಳ ಕುರಿತಾದ ಪತ್ರವ್ಯವಹಾರದಲ್ಲಿ ಪಂಡಿತರು ಒಬ್ಬ ಯೋಗ್ಯ ಮಧ್ಯಸ್ಥನನ್ನು ಆರಿಸುವ ಕುರಿತು ಚರ್ಚಿಸಿದ್ದಲ್ಲದೆ ಆ ಮಧ್ಯಸ್ಥರನ್ನು ಬ್ರಿಟಿಷ್, ಹಿಂದೂ, ಮುಸ್ಲಿಂ ಮತ್ತು ಸಿಖ್ ಮುಂದಿಯಿಂದ ಆರಿಸಬಾರದೆಂದೂ ತಿಳಿಸಿದ್ದರು. ಮೇಲಾಗಿ ಅಂಥ ಯೋಗ್ಯರಾದ ಮಧ್ಯಸ್ಥರ ಹೆಸರುಗಳ ಒಂದು ಪಟ್ಟಿಯನ್ನು ತಾವೂ ತಮ್ಮ ಗೆಳೆಯರೂ ಕೂಡಿ ತಯಾರಿಸಿರುವುದಾಗಿಯೂ ಆ ಹೆಸರುಗಳಲ್ಲಿ ಬೇಕಾದುದನ್ನು ಆರಿಸಿಕೊಳ್ಳಬಹುದಾಗಿಯೂ, ಎಂ. ಜಿನ್ನರು ಕೂಡ ಇದೇ ರೀತಿಯ ಮಧ್ಯಸ್ಥರ ಹೆಸರಿನ ಪಟ್ಟಿಯನ್ನು ತಯಾರಿಸಿರಬಹುದೆಂದು ತಾವು ನಂಬುವುದಾಗಿಯೂ ಪಂಡಿತರು ಅರುಹಿದರು. ಇದಕ್ಕೆ ಉತ್ತರವಾಗಿ ಎಂ. ಜಿನ್ನರು ಕೇವಲ ಮಧ್ಯಸ್ಥರನ್ನು ನಿರ್ಧರಿಸುವ ಪ್ರಶ್ನೆಯೇ ಅಲ್ಲದೆ ಇತರ ಹಲವು ವಿಷಯಗಳನ್ನೂ ಎಂಟಿಂಗುಗಳಲ್ಲಿ ಚರ್ಚಿಸಿದ್ದರೂ ಅವುಗಳಲ್ಲಿ ಯಾವುದೊಂದರ ಕುರಿತೂ ತೀರ್ಮಾನವೇನೂ ಆಗಿಲ್ಲ ಎಂದು ಜವಾಬ್ ಕಳುಹಿಸಿದರು. ಅಲ್ಲಿಗೆ ಅದು ಮುಗಿಯಿತು.

ಪತ್ರವ್ಯವಹಾರದ ಸಾರಾಂಶ

೪ನೇ ಇಸವಿ ಎಪ್ರಿಲ್ ೭ರಲ್ಲಿ ಲಾರ್ಡ್ ಪೆಥಿಕ್ ಲಾರೆನ್ಸರು ಮೌಲಾನಾ ಅಬ್ದುಲ್ ಕಲಂ ಆಜಾದರಿಗೂ ಎಂ. ಜಿನ್ನರಿಗೂ ಪತ್ರ ಬರೆದಿದ್ದರು. ಅದರಲ್ಲಿ— ಕಾಂಗ್ರೆಸ್ ಲೀಗ್‌ಗಳೊಳಗೆ ಒಂದು ಒಪ್ಪಂದವಾಗುವ ಹಾಗೆ ಪ್ರಯತ್ನಿಸಬೇಕೆಂದಿದ್ದೇನೆ; ಆದುದರಿಂದ ಈ ಬ್ರಿಟಿಶ್ ನಿಯೋಗಗೋಷ್ಠಿಯವರನ್ನೂ ವೈಸರಾಯರನ್ನೂ ಸಂಧಿಸಿ ವಿಷಯಗಳನ್ನು ಚರ್ಚಿಸುವ ಹಾಗೆ ಲೀಗಿನವರು ನಾಲ್ಕು ಮಂದಿ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ನಾಲ್ಕು ಮಂದಿ,ಹೀಗೆ ಪ್ರತಿನಿಧಿಗಳನ್ನು ಆರಿಸಿ ಕಳಿಸಲೆಂದು ಎನಂತಿ. ಬ್ರಿಟಿಶ್ ಇಂಡಿಯದ ಮುಂದಿನ ರಾಜ್ಯ ಘಟನೆಯ ಯೋಜನೆಯ ತತ್ವಗಳ ವಿಚಾರದಲ್ಲಿ ನಮ್ಮ ಸೂಚನೆಗಳಿವು:— ಒಂದು ಯೂನಿಯನ್ ಸರಕಾರ; (ಅದರ ವಶ ವಿದೇಶೀ ಕಾರ್ಯಭಾರ, ರಕ್ಷಣೆ ಮತ್ತು ವಹಿವಾಟು ಸಾಧನಗಳಿರತಕ್ಕದ್ದು.) ಪ್ರಾಂತಗಳ ಎರಡು ಗುಂಪು; (ಒಂದು ಹಿಂದುಗಳದೇ ಪ್ರಾಮುಖ್ಯವಾಗಿರುವ ಪ್ರಾಂತಗಳದು; ಇನ್ನೊಂದು ಮುಸ್ಲಿಮರೇ ಪ್ರಾಮುಖ್ಯವಾಗಿರುವ ಪ್ರಾಂತಗಳದು) ಸಂಸ್ಥಾನಗಳಿಗೂ ಈ ಘಟನೆಯಲ್ಲಿ ಸ್ಥಾನವಿರತಕ್ಕದ್ದು ಎಂದು ನಿರೂಪಿಸಲಾಗಿತ್ತು.

೪ನೇ ಇಸವಿ ಎಪ್ರಿಲ್ ತಾ. ೨೮ರಲ್ಲಿ ರಾಷ್ಟ್ರ[illegible]ನ್ನರಿಗೆ ಉತ್ತರ ಬರೆದರು:—ನೀವು ಸೂಚಿಸಿರುವ ಆ ಯೋಜನೆಯ ತತ್ವಗಳ ವಿಚಾರವನ್ನು ಇನ್ನಷ್ಟು ಸ್ಪಷ್ಟಗೊಳಿಸಬೇಕು. ಸ್ವಯಂಶಾಸನದ ವಿಷಯಗಳುಳ್ಳ ಒಂದು ಫೆಡರಲ್ ಯೂನಿಯನಿಗಾಗಿ ನಾವು ಹಾರೈಸಿಕೊಂಡಿದ್ದೇವೆ; ಅಂಥ ಫೆಡರಲ್ ಯೂನಿಯನಿಗಾಗಿ ವಿದೇಶೀ ಕಾರ್ಯಭಾರ, ರಕ್ಷಣೆ ಮತ್ತು ವಹಿವಾಟು ಸಾಧನಗಳ ಮೇಲಿನ ಅಧಿಕಾರವೂ ಅಲ್ಲದೆ, ಕರೆನ್ಸಿ, ಕಸ್ಟಮ್ಸ್, ಟಿರಿಫ್ ಮೊದಲಾದ ಇತರ ಕೆಲವು ವಿಷಯಗಳ ಮೇಲಿನ ಅಧಿಕಾರವೂ ಯೂನಿಯನಿನ ಕೈಯಲ್ಲಿಯೇ ಇರಬೇಕೆಂದೂ ನಮ್ಮ ಅಪೇಕ್ಷೆ ಎಂದಿದ್ದಾರೆ.

ರಾಷ್ಟ್ರಪತಿಗಳು ಅದೇ ಪತ್ರದಲ್ಲಿ ಪ್ರಾಂತಗಳನ್ನು ಎರಡು ಗುಂಪುಗಳನ್ನಾಗಿ ಏರ್ಪಡಿಸುವ ಕುರಿತೂ ಆಕ್ಷೇಪಿಸಿರುತ್ತಾರೆ. ಫೆಡರಲ್ ಯೂನಿಯನಿನ ಕೆಳಗೆ ಪ್ರಾಂತಗಳ ಗುಂಪುಗಳನ್ನು ರಚಿಸುವುದು—ಅದರಲ್ಲಿಯೂ ಜಾತಿಯ ಅಥವಾ ಧರ್ಮದ ತಳಹದಿಯ ಮೇಲೆ ಅದನ್ನು ನಿರ್ಮಿಸುವುದು ತಪ್ಪಿನ್ನಬೇಕು; ಅಲ್ಲದೆ ಒಂದು ಪ್ರಾಂತ, ಒಂದು ಗುಂಪಿಗೆ ಸೇರುವ ಅಥವಾ ಸೇರದಿರುವ ಈ ಸ್ವಾತಂತ್ರ್ಯವು ಆ ಪ್ರಾಂತಗಳಿಗೆ ಇಲ್ಲದಿರುವುದೂ ಸರಿಯಲ್ಲವೆನ್ನಬೇಕು. ಒಟ್ಟು ಒಂದು ಪ್ರಾಂತ ತನ್ನ ಇಚ್ಛೆಗೆ ವಿರೋಧವಾಗಿ ವರ್ತಿಸುವಂತೆ ಅದನ್ನು ಬಲಾತ್ಕರಿಸುವುದು ಶುದ್ಧ ನ್ಯಾಯವಿರುದ್ಧವೇ ಸರಿ— ಎಂದೂ ರಾಷ್ಟ್ರಪತಿಗಳು ಸೂಚಿಸಿದ್ದರು.

ಇದೆರಲ್ಲಿ ಹಿಂದೀ ಸ್ವಾತಂತ್ರ್ಯದ ಮಾತಾಗಲಿ ಇಂಡಿಯದಿಂದ ಬ್ರಿಟಿಷ್ ಸೇನೆಗಳನ್ನು ಹಿಂದಕ್ಕೆ ಕರೆಸುವ ವಿಚಾರವಾಗಲೀ ಇಲ್ಲ—ಇವನ್ನು ಆಧರಿಸಿಕೊಂಡು ಮಾತ್ರ ನಾವು ಭಾರತದ ಭವಿಷ್ಯದ ಕುರಿತು ಮತ್ತು ಯಾವುದಾದರೂ ಮಧ್ಯಕಾಲದ ಏರ್ಪಾಡಿನ ಕುರಿತು ಚರ್ಚಿಸಬಹುದಾಗಿದೆ ಎಂದು ರಾಷ್ಟ್ರಪತಿಗಳು ನುಡಿದರು. ಅಲ್ಲದೆ "ಹೊರಗಿನ ರಾಷ್ಟ್ರ ಶಕ್ತಿಯೊಂದು ಇನ್ನೂ ಭಾರತದಲ್ಲಿ ಆಳುತ್ತಿರುವಾಗ ಈ ಸಂಧಾನಕಾರ್ಯ ಅಥವಾ ವ್ಯವಹಾರದ ಮಾತುಕತೆಗಳಲ್ಲಿ ವಾಸ್ತವಿಕತೆ ಏನೂ ಕಾಣದು" ಎಂದೂ ಅವರು ತಿಳಿಸಿರುವರು.

ಈ ಸಂದರ್ಭದಲ್ಲಿ ರಾಷ್ಟ್ರಪತಿಗಳು ಈ ಸಂಧಿ ವ್ಯವಹಾರಕ್ಕೆ ಬರಲು ಒಪ್ಪಿ ಕಾಂಗ್ರೆಸಿನ ಕಡೆಯಿಂದ ಇನ್ನು ಮೂರು ಮಂದಿ ಪ್ರತಿನಿಧಿಗಳ ಹೆಸರನ್ನೂ ಸೂಚಿಸಿ

ಭಾರತದ ಸಚಿವರಿಗೆ ಎಂ. ಜಿನ್ನರ ಪತ್ರ

ಎಂ. ಜಿನ್ನರು ಕಳೆದ ಎಪ್ರಿಲ್ ತಾ. ೨೯ರಲ್ಲಿ ಭಾರತದ ಸಚಿವರಿಗೊಂದು ಪತ್ರ (ಉತ್ತರ) ಕಳುಹಿಸಿದ್ದರು:—ಅದರಲ್ಲಿ ಅವರು ಮುಸ್ಲಿಂ ಲೀಗ್ ಅಂದೇ ಇಸವಿಯಲ್ಲಿ ಲಾಹೋರ್ ಅಧಿವೇಶನದಲ್ಲಿ ಮಂಜೂರು ಮಾಡಿದ ಠರಾವಿನ ಕುರಿತು ಪ್ರಸ್ತಾಪಿಸಿದ್ದರು; (ಠರಾವಿನ ನಕಲನ್ನೂ ಜತೆಯಲ್ಲಿ ಇರಿಸಿದ್ದರು) ಕೆಲವೊಂದು ಪ್ರಾಮುಖ್ಯ ವಿಷಯಗಳಲ್ಲಿ ಸಂಶಯ ನಿವೃತ್ತಿಯಾಗಬೇಕೆಂದಿದ್ದರು. ಅಲ್ಲದೆ ಲೀಗಿನವರು ವ್ಯವಹಾರಕ್ಕೆ ಬರಲು ಒಪ್ಪಿರುವರೆಂದು ತಿಳಿಸಿ ಲೀಗಿನ ಕಡೆಯ ಪ್ರತಿನಿಧಿಗಳ ಹೆಸರನ್ನೂ ಸೂಚಿಸಿದ್ದರು

ಸಿಮ್ಲಕ್ಕೆ ಆಮಂತ್ರಣ

ಲಾರ್ಡ್ ಪೆಥಿಕ್ ಲಾರೆನ್ಸರು ಸಿಮ್ಲದ ಸಮ್ಮೇಳನಕ್ಕೆ ಕಾಂಗ್ರೆಸಿಗೂ ಲೀಗಿನವರಿಗೂ ತಾ. ೯—೪—೪೬ರಲ್ಲಿ ಆಮಂತ್ರಣ ಕಳುಹಿಸಿದರು. ಈ ಸಂದರ್ಭದಲ್ಲಿ ಕಾಂಗ್ರೆಸಿನವರು ಸೂಚಿಸಿದುದನ್ನೂ, ಲೀಗಿನವರ ಲಾಹೋರು ನಿರ್ಣಯದ ವಿಚಾರವನ್ನೂ ತಾವು ಗುರುತಿಸಿಕೊರಡಿರುವೆವಾಗಿ ಅವರು ತಿಳಿಯಪಡಿಸಿ ಮೇ ತಾ. ೮ರಂದು ಆರಂಭವಾಗಲಿದ್ದ ಚರ್ಚೆಯ ವಿಷಯಗಳು ಯಾವುವೆಂದು ಶ್ರುತಪಡಿಸಿದರು.—ಆ ವಿಜಿಂಡ ಹೀಗಿತ್ತು: (೧) ಪ್ರಾಂತಗಳ ಗುಂಪುಗಳು; (ಎ) ರಚನೆ (ಬಿ) ಗುಂಪಿಗೆ ಸೇರತಕ್ಕ ವಿಷಯಗಳನ್ನು ನಿರ್ಣಯಿಸುವ ರೀತಿ (ಸಿ) ಗುಂಪಿನ ವ್ಯವಸ್ಥೆಯ ಗುಣಸ್ವಭಾವ. (೨) ಯೂನಿಯನ್ (ಎ)ಯೂನಿಯನಿನ ವಿಷಯಗಳು. (ಬಿ) ಯೂನಿಯನಿನ ರಚನೆಯ ಗುಣ ಸ್ವಭಾವ. (ಸಿ) ಹಣಕಾಸು (ಡಿ) ರಾಜ್ಯಘಟನಾ ರಚನೆಯ ಯಂತ್ರ (ಎ) ರಚನೆ. (ಬಿ) ಕೆಲಸಕಾರ್ಯಗಳು. — ಯೂನಿಯನಿನ ವಿಚಾರದಲ್ಲಿ; (೩) ಗುಂಪುಗಳ ವಿಚಾರದಲ್ಲಿ. (೩) ಪ್ರಾಂತಗಳ ವಿಚಾರದಲ್ಲಿ.

ವಿಭಾಗ ಮತ್ತು ಸಮಾನತೆಯ ಕುರಿತು ಕಾಂಗ್ರೆಸಿನವರ ಆಕ್ಷೇಪ

ರಾಷ್ಟ್ರಪತಿಗಳು ಲಾರ್ಡ್ ಪೆಥಿಕ್ ಲಾರೆನ್ಸರಿಗೆ ಮೇ ತಾ. ೬ರಲ್ಲಿ ಒಂದು ಕಾಗದ ಬರೆದಿದ್ದರು; ಅದರಲ್ಲಿ ಅವರು ಹಿಂದಿನ ದಿನದ ಸಮ್ಮೇಳನದ ವಿಚಾರವನ್ನೆತ್ತಿಕೊಂಡು, ಅಂದಿನ ಮಾತುಕತೆಗಳು ಸ್ಪಷ್ಟವಾಗಿರಲಿಲ್ಲ ಎಂದಿದ್ದರು. ಅಲ್ಲದೆ ತಾವು

ತಮ್ಮ ಪತ್ರದಲ್ಲಿ "ಇಂಡಿಯದ ಸ್ವಾತಂತ್ರ್ಯ ಮತ್ತು ಅದರ ಸ್ಥಾಪನೆಗಾಗಿ ಹಿಂದುಸ್ಥಾನದಿಂದ ಬ್ರಿಟಿಶ್ ಸೇನೆಯ ನಿರ್ಗಮನ"ಎಂಬ ಈ ಎಪಯಗಳ ಕುರಿತು ಸೂಚಿಸಿದ್ದ ಅಂಶಗಳನ್ನು ಸ್ಮರಣೆಗೆ ತಂದುಕೊಡುತ್ತ, ಭಾರತದ ಸ್ವಾತಂತ್ರ್ಯದ ಪ್ರಶ್ನೆ ಶೀಘ್ರವೇ ತೀರ್ಮಾನವಾದ ಹಾಗೇ ಸರಿ; ಮುಂದೆ ಕಾ। ಎಸೆಂಬ್ಲಿಯು ಸ್ವತಂತ್ರ ಹಿಂದೀ ಒನಾಂಗದ ಅಭಿಮತವನ್ನೇ ವ್ಯಕ್ತಪಡಿಸಿ ಅದರಂತೆ ನಡೆವುದಾಗಿದೆ. ಅದು ಈ ಮೊದಲಿನ ಯಾವುದೊಂದು ಏರ್ಪಾಡುಗಳಿಗೂ ಕಟ್ಟುಬೀಳದು; ಅಥವಾ ಒದ್ದಾಗದು. ಈಗ ಬೇಕಾದುದೆಂದರೆ—ಒಂದು ತಾತ್ಕಾಲಿಕ ಸರಕಾರದ ಸ್ಥಾಪನೆ. ಆ ಸರಕಾರದ ಸ್ವರೂಪವು ಸಾಧ್ಯವಿರುವ ಮಟ್ಟಿಗೆ ಒಂದು ಸ್ವತಂತ್ರ ಸರಕಾರವನ್ನೇ ಹೋಲುವುದಾಗಿರಬೇಕು ಎಂದು ಸೂಚಿಸಿದ್ದರು. ಮುಖ್ಯವಾಗಿ ಭಾರತವನ್ನು ಎಭಾಗಿಸಲೂ, ಕಾರ್ಯಕಾರಿ ಮತ್ತು ಶಾಸನ ಸಭೆಗಳಲ್ಲಿ ಗುಂಪುಗಳ ಸಮಾನತೆಯನ್ನು ಸ್ಥಾಪಿಸಲೂ ತಮ್ಮ ಒಪ್ಪಿಗೆ ಇಲ್ಲವೆಂದು ಕೂಡ ತಿಳಿಸಲಾಗಿತ್ತು.

ಅನಂತರ ಲಾರ್ಡ್ ಪೆಥಿಕ್ ಲಾರೆನ್ಸರು ಕಾಂಗ್ರೆಸ್ ಮತ್ತು ಲೀಗುಗಳ ಅಧ್ಯಕ್ಷರಿಗೆ ಮೇ ತಾ. ೮ರಲ್ಲಿ ಪತ್ರ ಬರೆದು, ಇದರಲ್ಲಿ ಅವೆರಡು ಪಂಗಡಗಳವರೂ ಒಪ್ಪಂದಕ್ಕೆ ಬರುವಂತೆ ಆಲೋಚಿಸಬೇಕಾದ ೯ ವಿಚಾರಗಳ ಕುರಿತು ಪ್ರಸ್ತಾಪಿಸಿದ್ದರು. ಸ। ಭಾ। ಯೂನಿಯನ್ ಸರಕಾರ, ಅದಕ್ಕಿರುವ ಅಧಿಕಾರದ ಶಾಖೆಗಳು, ಪ್ರಾಂತಿಕ ಸರಕಾರಗಳಿಗಿರಬೇಕಾದ ಅಧಿಕಾರ, ಪ್ರಾಂತಗಳ ಗುಂಪಿನ ನಿರ್ಮಾಣ, ರಾಜ್ಯಘಟನೆಯ ನಿರ್ಮಾಣ ಸಂಸ್ಥೆಯ ವ್ಯವಸ್ಥೆ, ಅದಕ್ಕೆ ಆರಿಸಬೇಕಾದ ಪ್ರಾತಿನಿಧ್ಯದ ಸ್ವರೂಪ ಇವೇ ಮೊದಲಾದ ಸಂಗತಿಗಳ ವಿಚಾರದಲ್ಲಿ ವಿವರಿಸಲಾಗಿತ್ತು.

ಇದಕ್ಕೆ ಮುಸ್ಲಿಂ ಲೀಗ್ ಅಧ್ಯಕ್ಷರು ಮೇ ತಾ. ೮ರಲ್ಲಿ ಆಕ್ಷೇಪಿಸಿ ಪತ್ರ ಬರೆದರು. ಮುಖ್ಯವಾಗಿ ಒಂದೇ ಒಂದು ರಾಜ್ಯಘಟನಾ ನಿರ್ಮಾಣ ಸಮಿತಿ ಇರಕೂಡದೆಂದೇ ಎಂ. ಜಿನ್ನರ ಸಾಧನೆ. ಇದಕ್ಕೆ ಲಾರ್ಡ್ ಪೆಥಿಕ್ ಲಾರೆನ್ಸರು ಉತ್ತರ ಕೊಡುತ್ತ ಇತ್ತಟ್ಟಿನವರಿಗೂ ಅನುಕೂಲಿಸುವಂತೆ ಮೂಲ ಸೂಚನೆಗಳಲ್ಲಿ ಕೊಂಚ ಬದಲಾವಣೆ ಮಾಡಿದ್ದರಬಹುದೆಂದು ತಿಳಿಸಿದರು.

ರಾಷ್ಟ್ರಪತಿಗಳೂ ಈಗ ಇವೆಲ್ಲ ಅಂಶಗಳ ಪತ್ರಕ್ಕೆ ಉತ್ತರ ಬರೆದು ಭಾರತ ಸಚಿವರ ಬಳಿಗೆ ಕಳುಹಿಸಿದರು ಆದರಲ್ಲಿ ಅವರು ಪ್ರಾಂತಗಳ ಗುಂಪಿನ ನಿರ್ಮಾಣ, ಕಾರ್ಯಕಾರಿ ಅಥವಾ ಶಾಸನ ಸಭಾ ಸಂಸ್ಥೆಗಳಲ್ಲಿನ "ಸಮಾನತೆ"ಇವುಗಳ ಕುರಿತು ಆಕ್ಷೇಪಿಸಿದ್ದರು. ಯೂನಿಯನ್ ಸರಕಾರಕ್ಕೆ ಕರೆನ್ಸಿ, ಕಸ್ಟಮ್ಸ್ ಪ್ಲಾನಿಂಗ್ ಮೊದಲಾದ ಶಾಖೆಗಳೂ ಸೇರಬೇಕೆಂದಿದ್ದರು. ಅಲ್ಲದೆ ಇವೆಲ್ಲ ವಿಷಯಗಳಲ್ಲಿ ಯಾವ ಬದಲಾವಣೆಗಳಾಗಬೇಕು, ಈ ಕುರಿತು ಕಾಂಗ್ರೆಸಿನ ಸೂಚನೆಗಳು ಯಾವುವು ಎಂಬುದನ್ನೂ ವಿಸ್ತಾರವಾಗಿ ತಿಳಿಸಿದ್ದರು.

ಈ ಮಧ್ಯದಲ್ಲಿ ಪಂಡಿತ ನೆಹರುರವರು ಮತ್ತು ಎಂ. ಜಿನ್ನರೂ—ಇತ್ತಂಡಗಳ ವಿವಾದದ ತೀರ್ಮಾನಕ್ಕಾಗಿ ಒಬ್ಬ ಮಧ್ಯಸ್ಥನನ್ನು ನೇಮಿಸಿಕೊಳ್ಳುವ ಕುರಿತು ಮೇ ತಾ. ೧೦ರಿಂದ ಕಾಗದಪತ್ರಗಳ ಓಡಾಟಕ್ಕೆ ಆರಂಭವಾಗಿತ್ತು. ಆ ಮಧ್ಯಸ್ಥರ ಕೆಲವು ಹೆಸರುಗಳೂ ತಯಾರಾಗಿತ್ತು. ಇಷ್ಟರಲ್ಲಿ ಲೀಗಿನವರ ಕನಿಷ್ಠ ನಿಮಿತಿಯ ಕೇಳಿಕೆಗಳನ್ನು ಒಳಗೊಂಡ ಒಂದು ಮೆಮೊರಿಯಂಡಮ್ ಕಾಂಗ್ರೆಸಿಗೂ ಬ್ರಿಟಿಶ್ ನಿಯೋಗ ಗೋಷ್ಠಿಯವರಿಗೂ ಕಳುಹಿಸಲ್ಪಟ್ಟಿತು.

ಆ ಮೆಮೊರಾಂಡಮಿನಲ್ಲಿ ಲೀಗಿನವರು ಮುಸ್ಲಿಂ ಪ್ರಾಂತಗಳಾದ ಪಂಜಾಬು, ಗಡಿನಾಡು, ಬಲೂಚಿಸ್ಥಾನ, ಸಿಂಧ್, ಬಂಗಾಲ, ಅಸಾಂ ಎಂಬ ಈ ೬ ಪ್ರಾಂತಗಳನ್ನು ಒಟ್ಟಾಗಿ ಸೇರಿಸಿದ ಒಂದು ಗುಂಪಾಗಿ ಮಾರ್ಪಡಿಸಬೇಕು ಎಂದಿದ್ದರು. ಈ ಪಾಕಿಸ್ತಾನ ಕ್ಷೇತ್ರದವರೂ ಹಿಂದೂ ಪ್ರಾಂತಗಳವರೂ ಮಾಡಬೇಕಾದ ಕರ್ತವ್ಯಗಳನ್ನು ನಿರೂಪಿಸಿದ್ದರು. ಮುಸ್ಲಿಮರ ಈ ಆರು ಪ್ರಾಂತಗಳಿಗೆ ಪ್ರತ್ಯೇಕ ರಾಜ್ಯಘಟನಾ ನಿರ್ಮಾಣದ ವ್ಯವಸ್ಥೆಯೇ ಮಾಡಬೇಕೆಂದಿದ್ದರು. ಈ ಸಂಸ್ಥೆಗೆ ಪ್ರತಿನಿಧಿಗಳನ್ನು ಆರಿಸಬೇಕಾದ ವಿಧಾನವನ್ನು ಸೂಚಿಸಿ ಪ್ರಾತಿನಿಧ್ಯದ ಸಮಾನತೆಯ ಕುರಿತು ಪ್ರತಿಪಾದಿಸಿದ್ದರು. ಚರ್ಚಾಸ್ಪದವಾದ ವಿಚಾರಗಳ ತೀರ್ಮಾನ ಹೇಗೆ ಎಂಬಿತ್ಯಾದಿ ವಿಷಯಗಳಲ್ಲಿ ಅನುಸರಿಸಬೇಕಾದ ರೀತಿಯ ಕುರಿತೂ ಶ್ರುತಪಡಿಸಿ ಇದು ಲೀಗಿನ ಅರ್ಪಣೆ ಎಂದಿದ್ದರು.

ಇದಕ್ಕೆ ಮೇ ತಾ. ೧೪ರಲ್ಲಿ ಕಾಂಗ್ರೆಸಿನ ಕಡೆಯ ಸೂಚನೆಗಳು ಬಂದವು. ಅವು ಲೀಗಿನ ಸೂಚನೆಗಳ ಕುರಿತು ಟೀಕೆಗಳನ್ನೂ ಒಳಗೊಂಡಿದ್ದವಲ್ಲದೆ ಕಾಂಗ್ರೆಸ್ ಹಿಂದೆ ಹೇಳಿದುದನ್ನೇ ಈಗಲೂ ಸಮರ್ಥಿಸುವುದಾಗಿತ್ತು. ಲೀಗಿನ ಸೂಚನೆಗಳನ್ನು ಜಾರಿಗೆ ತಂದರೆ ಅದರಿಂದ ಉಂಟಾಗುವ ಪರಿಣಾಮವೇನೆಂಬುದು ಕಾಂಗ್ರೆಸಿನವರ ಸೂಚನೆಯಿಂದ ಸ್ಪಷ್ಟವಾಗಿ ತಿಳಿಯುವಂತಾಗಿದೆ.

ಮಧ್ಯಸ್ಥರ ಮಾತು, ಮಾತಿನಲ್ಲಿಯೇ ಮುಕ್ತಾಯವಾಯಿತೆಂದು ಬೇರೆ ಹೇಳಬೇಕಾಗಿಲ್ಲ.

—

ಬ್ರಿಟಿಶ್ ನಿಯೋಗ ಗೋಷ್ಠಿಯವರ ಸೂಚನೆ-ಕಾ॥ ವೆ॥ ಕಮಿಟಿಯ ಹಾವಭಾವ.

ಹೊಸ ಡಿಲ್ಲಿಯಲ್ಲಿ ಕಾಂ॥ ವೆ॥ ಕಮಿಟಿಯವರು ನಿಯೋಗಗೋಷ್ಠಿಯವರ ಸೂಚನೆಗಳ ಕುರಿತು ಆಲೋಚಿಸುತ್ತಿದ್ದಾರೆಂದು ತಾ. ೧೯ರ ವಾರ್ತೆ. ಈ ಸಂಬಂಧ ಉಂಟಾಗಿರುವ ಸಂಶಯ ನಿವೃತ್ತಿಗಾಗಿ ಬ್ರಿಟಿಶ್ ಮಂತ್ರಿಗಳನ್ನು ಕೇಳಲಾಗಿದೆ.

ಕಾಂಗ್ರೆಸಿಗೆ ಸ್ಪಷ್ಟವಾಗಿ ತಿಳಿಯಬೇಕಾದ ಕೆಲ ವಿಷಯಗಳೆವು—ಪ್ರಾಂತಗಳ ಗುಂಪು; ಅವಕ್ಕೆ ಆ ಗುಂಪಿನಲ್ಲಿ ಸೇರುವ ಅಥವಾ ಸೇರದಿರುವ ಸ್ವಾತಂತ್ಯದ ವಿಚಾರ. ಕರೆನ್ಸಿ ಪ್ರಶ್ನೆಯು ಯೂನಿಯನಿಗೆ ಸೇರಿದ್ದೇ ಅಲ್ಲವೆ? ಎಂಬುದು.

ಗಾಂಧಿಜಿಯವರು ಬ್ರಿಟಿಷ್ ಮಂತ್ರಿಗಳೊಡನೆ ಮೇಲ್ಕಂಡ ವಿಷಯಗಳ ಕುರಿತು ಮಾತಾಡಿರುವರೆಂದು ತಿಳಿದುಬಂದಿದೆ

ವರ್ಕಿಂಗ್ ಕಮಿಟಿ,ಕೆಲವೊಂದು ವಿಚಾರಗಳ ಸಂದೇಹಕ್ಕೆ ತಕ್ಕ ನಿವೃತ್ತಿಗಳನ್ನು ಬ್ರಿಟಿಷ್ ಮಂತ್ರಿಮಂಡಲದಿಂದ ಪಡೆಯಬೇಕೆಂದು ಠರಾವು ಮಂಜೂರು ಮಾಡಿದೆ... ಆ ವಿಷಯಗಳೆವು:—ಪ್ರಾಂತಗಳು ಆ ಒಂದು ಗುಂಪಿನಲ್ಲಿ ಸೇರಲೇ ಬೇಕೆಂಬುದು ಕಡ್ಡಾಯವೆ? ಅಥವಾ ಸೇರದಿರಲು ಅವಕ್ಕೆ ಸ್ವತಂತ್ರವಿದೆಯೆ?— ಈ ಗುಂಪುಗಳಲ್ಲಿ ತಾನು ಒತ್ತಾಯದಿಂದ ಸೇರಲಾರೆನೆಂದು ಗಡಿನಾಡು ಆಕ್ಷೇಪಿಸುತ್ತಿದೆ.

ಆಶ್ರಿತ ಸಂಸ್ಥಾನಗಳ ಮಟ್ಟಿಗೆ ಕಾನ್ಸ್ಟ್ಯುಯೆಂಟ್ ಎಸೆಂಬ್ಲಿಯಲ್ಲಿನ ಪ್ರಾತಿನಿಧ್ಯದ ರೀತಿ ಹೇಗೆ? ಈ ಎಸೆಂಬ್ಲಿಯಲ್ಲಿ ಆ ಸಂಸ್ಥಾನಗಳ ಪ್ರಜೆಗಳಿಗೂ ಸರಿಯಾದ ಪ್ರಾತಿನಿಧ್ಯವಿದೆಯೆ? ಈ ಭಾಗದಲ್ಲಿ ಸಂಸ್ಥಾನಾಧೀಶರು ಅಥವಾ ಅವರಿಂದ ನಾಮಕರಣ ಹೊಂದಿದವರು ತಮ್ಮ ಪ್ರಾತಿನಿಧ್ಯ ವಹಿಸಬಾರದೆಂದು ಸಂಸ್ಥಾನದ ಪ್ರಜೆಗಳ ಅಪೇಕ್ಷೆ.

ಕಾ॥ ಎಸೆಂಬ್ಲಿ ಡೆಲಿಗೇಟರ ಚುನಾವಣೆಯಲ್ಲಿ ಓಟು ಮಾಡಲು ಬಂಗಾಳ ಅಸಾಮಿನ ಯುರೋಪೀಯ ಮೆಂಬರರಿಗೆ ಅವಕಾಶವಿದೆಯೆ?

ಗಡಿನಾಡಿನಲ್ಲಿ ಹಿಂದೂ—ಸಿಖರ ಸಂಖ್ಯೆ ಸುಮಾರು ೨॥ ಲಕ್ಷ; ಇದು ಯುರೋಪಿಯ ಜನಸಂಖ್ಯೆಗಿಂತ ದೊಡ್ಡದು. ಆದ ಕಾ॥ ಎಸೆಂಬ್ಲಿಯಲ್ಲಿ ಆ ಹಿಂದೀರಿಗೆ ಪ್ರಾತಿನಿಧ್ಯವಿಲ್ಲ.

ಅಸಾಂ ಪ್ರಧಾನರು ಪ್ರಾಂತಗಳನ್ನು ಗುಂಪಿನಲ್ಲಿ ಸೇರಿಸುವ ವಿಧಾನದ ಕುರಿತು ಕಟುವಾಗಿ ಟೀಕಿಸಿದ್ದಾರೆ.

ಪ್ರಕಟಣೆ

ಸರ್ವ ಜನರಿಗೂ ತಿಳಿಯುವ ಬಗ್ಗೆ.

ಮಂಗಳೂರು ತಾಲೂಕು ಪಣಂಬೂರು ಗ್ರಾಮದ ಅಚ್ಚುತ ಪೇಟೆಯಲ್ಲಿರುವ ನಾರಾಯಣಾಚ್ಛಾರಿಯ ಮಗ ಚಂದ್ರಯ್ಯಾಚಾರಿಯ್ಯಾದ ನಾನು ಈ ಮೂಲಕ ಜಾಹೀರು ಮಾಡುವುದೇನೆಂದರೆ:—

ನನ್ನ ತಂದೆ ನಾರಾಯಣಾಚಾರಿಯವರು ಕೆಲವು ಸಮಯದ ಲಾಗಾಯಿತು ಬುದ್ಧಿಸ್ವಾಸ್ಥ್ಯವಿಲ್ಲದೆ ಚಿತ್ತಭ್ರಮೆಯಿಂದಾಗಿ ಮನೆಯಲ್ಲಿ ಸರಿಯಾಗಿರದೆ ಅವರ ಇಚ್ಛೆಯಂತೆ ಎಲ್ಲೆಲ್ಲಿ ತಿರುಗುತ್ತಾಯಿರುವರು. ಅವರ ಹೆಸರಲ್ಲಿ ಮಂಗಳೂರು ತಾಲೂಕು ಕಚೇರಿ D. R. ನಂಬ್ರ 404/37 ತಾ. 19—2—28ನೇ ಮೊಕದಮೆಯಲ್ಲಿ ಹೌಸೈಟು ದರ್ಕಾಸ್ತು ಆಗಿರುವ ಸದ್ರಿ ನಂಬ್ರ 54ನೇ ಪಣಂಬೂರು ಗ್ರಾಮದ ಸದ್ರಿಯವರ ಹೆಸರ ನಂಬ್ರ ಸ್ಪೆಶಲ್ 48ನೇ ಪಟ್ಟಿಗೊಪ್ಪಿದ ಸರ್ವೆ ನಂಬ್ರ 180/2 ಬಾಗಾಯ್ತು ಸೆಂಟ್ಸು 39 ವಿಸ್ತೀರ್ಣದ ಸ್ಥಳ ಮತ್ತು ಇದರಲ್ಲಿ ನಾವೆಲ್ಲರೂ ಸಮುಚ್ಚಿಯಿಂದ ಮಾಡಿಸಿರುವ ಮನೆಕಟ್ಟಡ ಭಾವಿ ಮರಮಟ್ಟು ಇತ್ಯಾದಿ ಕೃತಗಳನ್ನು ಬೇರೆಯವರಿಗೆ ಪರಾಧೀನ ಮಾಡುವರೆ ಅವರಿಗೆ ಹಕ್ಕಿಲ್ಲ. ಸದ್ರಿ ಆಸ್ತಿಯ ಮನೆಯಲ್ಲಿ ನಾವು ವಾಸ್ತವ್ಯವಿದ್ದು ಸ್ಥಳ ಮಾತ್ರ ಅವರ ಹೆಸರಲ್ಲಿ ದರ್ಕಾಸ್ತು ಆದಾಗ್ಯೂ ಸರ್ವ ಕೃತಗಳು ನಮ್ಮ ಸಮಷ್ಟಿ ಹಕ್ಕಿನದು. ಸದ್ರಿ ಆಸ್ತಿ ಮೇಲೆ ಈ ತನಕ ಯಾವುದೊಂದು ತರದ ಹೊಣೆ ಜವಾಬ್ದಾರಿಗಳೇನೂ ಇರುವುದಿಲ್ಲ. ಮತ್ತು ಅವರಿಗೆ ಪರಾಧೀನ ಮಾಡುವ ಅಗತ್ಯವೂ ಇರುವುದಿಲ್ಲ. ಆದುದರಿಂದ ಅವರಿಗೆ ಬುದ್ಧಿ ಸ್ವಾಧೀನ ಇಲ್ಲದಿರುವುದರಿಂದ ಸದ್ರಿ ಸ್ಥಳ ಸರ್ವಾಧಿಯನ್ನು ಯಾರಾದರೂ ದುರುದ್ದೇಶದಿಂದ ಜವಾಬ್ದಾರಿಯಾ ಕ್ರಯಕ್ಕೆ ಪಡಕೊಳ್ಳುವರೆ ಪ್ರಯತ್ನಿಸಿ ಆ ರೀತಿ ಮಾಡಿಕೊಂಡರೆ ಸಿಂಧುವಾಗಲಿಕ್ಕಿಲ್ಲ. ನನ್ನ ತಂದೆ ಓರ್ವರೇ ಯಾವ ವಿಧದಿಂದಲೂ ಪರಾಧೀನ ಮಾಡಿದ್ದಾದರೆ ಅಂಥಾ ಯಾವತ್ತು ಪರಾಧೀನವು ಸಿಂಧುವಾಗದು. ಆದ್ದರಿಂದ ಸದ್ರಿ ಆ ಆಸ್ತಿ ವಗೈರೆ ಸರ್ವಾಧಿಯನ್ನು ಯಾರಾದರೂ ಪರಾಧೀನಕ್ಕೆ ಪಡಕೊಂಡರೆ ಯಾ ಆದರೆ ಹೊಣೆ ಜವಾಬ್ದಾರಿಯಲ್ಲಿ ಸಾಲ ವಗೈರೆ ಕೊಟ್ಟರೆ ಅಂಥಾ ಪರಾಧೀನಗಳಾಗಲೀ, ಹೊಣೆ ಜವಾಬ್ದಾರಿಗಳಾಗಲೀ ಸದ್ರಿ ಆಸ್ತಿ ಕಟ್ಟಡ ಮರಮಟ್ಟು ಸರ್ವಾಧಿಗೆ ಭಾಧಿಸಕೂಡದೆಂಬ ಸಂಗ್ತಿ ಈ ಮೂಲಕ ತಿಳಿಸಿದ್ದೇನೆ.

ಪಣಂಬೂರು, ತಾ. 20—5—1946.

ಚಂದ್ರಯ್ಯ ಆಚಾರಿಯ ರುಜು.

ಕಾಲಿನ ಹುಣ್ಣುಗಳು ನಿಮ್ಮ ಕಾಲ್ಬುರುಕು ಮಾಡದಂತೆ ನೋಡಿಕೊಳ್ಳಿ.
ಸಾಂಬಕ್ ನೋವು ನಿವಾರಿಸಿ ಆತ್ಯಾಶ್ಚರ್ಯಕಾರಿಯಾಗಿ ವಾಸಿ ಮಾಡುತ್ತದೆ.

ಕುರು, ವ್ರಣ, ಕಾಲಿನ ಹುಣ್ಣು ಉಂಟಾದಲ್ಲಿ, ಸಾಂಬಕ್ ನೋವು ಉಪಶಮನಗೊಳಿಸಿ, ಕೀವು ಆರಿಸುವುದು ನಿಮಗೆ ಆತ್ಯಾಶ್ಚರ್ಯವಾಗಬಹುದು. ನೀವು ಮಾಡಬೇಕಾದುದೆಂದರೆ, ಸಾಂಬಕ್ ಮುಲಾಮು ಸರಿಯಾಗಿ ಲೇಪಿಸಿ ಗಾಯ ಕಟ್ಟಿರಿ. ಸಾಂಬಕ್ ನಲ್ಲಿರುವ ಉತ್ತಮ ವನಸ್ಪತಿ ತೈಲಗಳು ಸುಲಭವಾಗಿ ಚರ್ಮದೊಳಗೆ ಹೀರಿಕೊಳ್ಳಲ್ಪಡುತ್ತವೆ. ಆದುಕಾರಣ ನೋವು ಮತ್ತು ಬಾವು ಶೀಘ್ರ ಕಡಿಮೆಯಾಗುತ್ತವೆ. ಕಲೆಯೊಂದೂ ಉಳಿಯದಂತೆ ಸಾಂಬಕ್ ಗುಣಪಡಿಸುತ್ತದೆ. ಸಾಂಬಕ್ ಮುಲಾಂ, ಸಾಬೂನು ಮತ್ತು ಪೌಡರ್ ಎಲ್ಲಾ ಕಡೆಗಳಲ್ಲಿ ಬಿಕರಿಗಿದೆ.

ಯಾವಾಗಲೂ ಸಾಂಬಕ್ ಉಪಯೋಗಿಸಿ.

ZAM-BUK

ಕಾಯಿಲೆಗಳ ಕೊಬ್ಬಿನಿಂದ ವಿರಹಿತವಾಗಿದೆ.

ತಾ. ೨೧ರ ಕಾಂ॥ ವ॥ ಕಮಿಟಿ ಕಾರ್ಯಕಲಾಪಗಳು

ಕಳೆದ ತಾ. ೨೧ರಲ್ಲಿ ಡಿಲ್ಲಿಯಲ್ಲಿ ಕಾಂ। ವ। ಕಮಿಟಿ ಸಭೆ ತಿರುಗಿ ಸೇರಿ, ಕೆಲವೊಂದು ವಿಚಾರಗಳ ಸಂದೇಹ ನಿವೃತ್ತಿಗಾಗಿ ರಾಷ್ಟ್ರಪತಿಗಳು ಬ್ರಿಟಿಶ್ ಮಂತ್ರಿಗಳಿಗೆ ಬರೆದು ತಯಾರಿಸಿದ್ದ ಆ ಕಾಗದಕ್ಕೆ ಸೇರಿಸಬೇಕಾದ ಕೊನೆಯ ಮಾತುಗಳನ್ನೂ ಕೂಡಿಸಿರುವುದಾಗಿ ತಿಳಿದುಬಂದಿದೆ. ಅಂತೆ ಬ್ರಿಟಿಶ್ ಮಂತ್ರಿಗಳ ಆ ಸೂಚನೆಗಳ ಸಂಶಯ ನಿವೃತ್ತಿಗಾಗಿ ಮುಸ್ಲಿಂ ಲೀಗೂ ಪ್ರಯತ್ನಿಸುತ್ತಿದೆ ಎಂದೂ ಹೇಳಲಾಗಿದೆ.

ವ॥ ಕಮಿಟಿ ಸಂಶಯ ನಿವೃತ್ತಿಗಾಗಿ ಭಾರತ ಸಚಿವರಿಗೆ ಬರೆಯುವಂತೆ ರಾಷ್ಟ್ರಪತಿಗಳಿಗೆ ಅಧಿಕಾರ ಕೊಟ್ಟಿದೆ.

ಈಚಿಗೆ ಮಹಾತ್ಮರು ಎರಡು ದಿನ ಭಾರತ ಸಚಿವರೊಡನೆಯೂ ಸರ್ ಕ್ರಿಪ್ಸರೊಡನೆಯೂ ಮಾತಾಡಿ ಸಂದೇಹ ನಿವೃತ್ತಿ ಮಾಡಿಕೊಂಡಿದ್ದಾರೆ; ಬ್ರಿಟಿಶ್ ಮಂತ್ರಿಗಳ ಉತ್ತರದಿಂದ ಮಹಾತ್ಮರಿಗೆ ಸಮಾಧಾನವಾಗಿದೆ ಎಂದು ಸುದ್ದಿ.

ಮಹಾತ್ಮರು ಆ ಮಾತುಕಥೆಗಳ ವಿಚಾರವನ್ನು ವರ್ಕಿಂಗ್ ಕಮಿಟಿಗೆ ತಿಳಿಸಿದರು; ಅದರಿಂದ ಕಮಿಟಿಯೂ ತೃಪ್ತಿಯಾಯಿತು. ಆದರೆ ಇದೆಲ್ಲ ಬರಹ ಮೂಲಕವಾಗಿ ಬರಲಿ ಎಂದು ಕಮಿಟಿ ಪತ್ರಮುಖೇನ ಕೇಳುವಂತೆ ರಾಷ್ಟ್ರಪತಿಗಳಿಗೆ ಅಧಿಕಾರ ಕೊಟ್ಟಿದೆ ಎಂದು ಹೇಳಲಾಗಿದೆ ಮುಖ್ಯ ಮಂತ್ರಿಗಳು ಅರ್ಥ ಮಾಡಿಕೊಂಡಂತೆ ಗುಂಪು ವ್ಯವಸ್ಥೆಯೂ, ಕಾ॥ ಎಸ್ಸೆಂಬ್ಲಿ ಸಾರ್ವಭೌಮತ್ವವೂ ಇದೆ ಎಂದು ಬ್ರಿಟಿಶ್ ಮಂತ್ರಿಗಳು ಧೃಡಪಡಿಸುವುದಾದರೆ ಅದು ಕಾಂಗ್ರೆಸಿಗೆ ಒಪ್ಪಿಗೆಯೇ.

ಕಾ। ಎಸೆಂಬ್ಲಿ ಶ್ರೇಷ್ಠವಾದ ಸ್ವತಂತ್ರವಾದ ಸಂಸ್ಥೆಯಾಗಿದೆ ಎಂಬುದರ ಕುರಿತು ಬ್ರಿಟಿಶ್ ಮಂತ್ರಿಗಳು ಧೃಡವಚನ ಕೊಡಬೇಕೆಂಬುದೇ ಕಾಂಗ್ರೆಸಿನವರ ಇಂದಿನ ಒಂದು ಮುಖ್ಯ ಕೇಳಿಕೆಯಾಗಿದೆ.

ಮುಸ್ಲಿಂ ಲೀಗಿನವರ ಮೌನದಿಂದ ಮಧ್ಯಕಾಲದ ಸರಕಾರದ ಸ್ಥಾಪನೆ ಎಳಂಬಿಯಿದೆ; ಅವರ ಅಭಿಪ್ರಾಯ ಹೊರ ಬಿದ್ದೊಡನೆ – ಬೇಗನೇ ಅದು ಪ್ರಕಟವಾಗಲಿದೆ— ಆ ಸರಕಾರದ ಮತ್ತು ಕೊ। ಎಸೆಂಬ್ಲಿ ಸ್ಥಾಪನೆಯ ಕಾರ್ಯಗಳು ಈ ವಾರದಲ್ಲೇ ಮುಂದುವರಿಯುವುವು.

ಬಂಗಾಳ—ಅಸಾಂ ಶಾಸನ ಸಭೆಗಳ ಯುರೋಪೀಯ ಸದಸ್ಯರು ಕಾ। ಎಸೆಂಬ್ಲಿ ಡೆಲಿಗೇಟರರ ಆಯ್ಕೆಗಾಗಿ ಓಟು ಕೊಡುವುದಿಲ್ಲವೆಂದು ವದಂತಿ.

ಎಂ. ಜಿನ್ನಾ ಸಾಹೇಬರು ಇನ್ನೂ ಭಾರತ ಸುಧಾರಣೆಯ ಯೋಜನೆಯ ವ್ಯಾಸಂಗ ಮಾಡುತ್ತಲೇ ಇದ್ದಾರೆ. ಆದರೂ ಈ ದಿನಗಳಲ್ಲಿ ಲೀಗ್ ಮಾತಾಡಬಹುದಾಗಿದೆ.

ರಾಜ್ಯಘಟನಾ ನಿರ್ಮಾಣ ಸಂಸ್ಥೆಯಲ್ಲಿ ಸಂಸ್ಥಾನಗಳಿಗಿರುವ ೯೩ ಸ್ಥಾನಗಳೂ ಜನರಿಂದ ಆರಿಸಲ್ಪಟ್ಟ ಪ್ರತಿನಿಧಿಗಳಿಗೇ ಸಲ್ಲಬೇಕೆಂದು ಮೈಸೂರು ಸ್ಟೇಟ್ ಕಾಂಗ್ರೆಸಿನವರು ಒಂದು ಗಟ್ಟಿ ನಿರ್ಣಯ ಮಾಡಿರುತ್ತಾರೆ.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ ವಾರ್ಷಿಕ ಸಭೆ

—೫೦೫—

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ವಾರ್ಷಿಕ ಸಭೆಯು ತಾ. ೧೭—೫—೪೬ನೇ ದಿನ ಬೆಳಿಗ್ಗೆ ೯ ಘಂಟೆಗೆ ಶ್ರೀ। ಪಾಟೀಲ ಮಲ್ಲನ ಗೌಡರ ಅಧ್ಯಕ್ಷತೆಯಲ್ಲಿ ಸೇರಿತ್ತು. ಸಭೆಗೆ ೬೫ ಸದಸ್ಯರು ಹಾಜರಿದ್ದರು. ಕಳೆದ ಸಭೆಯ ಕಾರ್ಯಕಲಾಪಗಳು ಓದಿ ಸ್ವೀಕರಿಸಲ್ಪಟ್ಟವು.

೧. ದುಃಖ ಪ್ರದರ್ಶನ

ಶ್ರೀ। ಶ್ರೀನಿವಾಸ ಶಾಸ್ತ್ರಿ, ಶ್ರೀ। ಬ್ರುಲಾಭಾಯಿ ದೇಸಾಯಿ, ಅಶ್ವತ್ಥರಾವ ಮಹಿಷಿ ಇವರ ನಿಧನದ ಬಗ್ಗೆ ಈ ಸಭೆಗೆ ಅತ್ಯಂತ ದುಃಖವಾಗುತ್ತದೆ. ಮತ್ತು ಮೃತರ ಆತ್ಮಕ್ಕೆ ಶಾಂತಿಯನ್ನೀಯಲೆಂದು ಪರಮಾತ್ಮನನ್ನು ಪ್ರಾರ್ಥಿಸುತ್ತದೆ.

೨. ಅಖಿಲ ಭಾರತ ಕಮಿಟಿಯ ಸದಸ್ಯರು

೧. ಶ್ರೀ। ಚೆನ್ನಬಸಪ್ಪ ಅಂಬಲಿ, ೨. ಶ್ರೀ। ಕೆ. ಟಿ. ಭಾಷ್ಯಂ, ೩. ರಂಗರಾವ ದಿವಾಕರ, ೪. ಶ್ರೀ। ರಾಜಾರಾಮಾ ದುಬೆ, ೫. ಶ್ರೀ। ಗುದ್ದೆಪ್ಪ ಹಳ್ಳಿಕೇರಿ, ೬. ಶ್ರೀಮತಿ ಕಮಲಾ ದೇವಿ, ೭. ಶ್ರೀ। ಪಿ. ಎ. ಮಂಡಗಿ, ೮. ಶ್ರೀ। ಶ್ರೀನಿವಾಸ ಮಲ್ಯ, ೯. ಶ್ರೀ। ನಿಜಲಿಂಗಪ್ಪ, ೧೦. ಎಚ್. ಕೆ. ವೀರಣ್ಣ ಗೌಡ.

೩. ಪ್ರಾಂತಾಧ್ಯಕ್ಷರ ಆಯ್ಕೆ

ಈ ಸಲ ಪ್ರಾಂತಿಕ ಕಾ. ಕಮಿಟಿಗೆ ಶ್ರೀ। ಎಸ್. ನಿಜಲಿಂಗಪ್ಪನವರು ಅಧ್ಯಕ್ಷರಾಗಬೇಕೆಂದು ಈ ಸಭೆಯು ಸರ್ವಾನುಮತದಿಂದ ನಿರ್ಧರಿಸುತ್ತದೆ. ಮತ್ತು ಹೊಸ ವರ್ಷದ ಅಧಿಕಾರೀವರ್ಗ ಹಾಗೂ ಕಾರ್ಯಕಾರೀ ಮಂಡಳಿಯ ಸದಸ್ಯರನ್ನು ಆರಿಸಿ ಜಾಹೀರುಪಡಿಸಲು ಈ ಸಭೆಯು ಶ್ರೀ। ನಿಜಲಿಂಗಪ್ಪನವರಿಗೆ ಅಧಿಕಾರ ಕೊಡುತ್ತದೆ. ಸಭೆಯು ಸಂಜೆ ೫ ಘಂಟೆಯವರೆಗೆ ಮುಂದುವರಿಯಿತು.

ಮುಂದುವರಿದ ಸಭೆಯು ಶ್ರೀ। ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಸಂಜೆ ೬ ಘಂಟೆಗೆ ಪ್ರಾರಂಭವಾಯಿತು. [illegible] ಪತ್ರ ಹಾಗ[illegible]ಜು ಓದಿ ಮಂಜೂರು

೪. ಇಸೂರ ಕೈದಿಗಳು

ಮರಣದರೆಡನೆಗೆ ಗುರಿಯಾಗಿದ್ದ ಅಷ್ಟಿ ಹಾಗೂ ಚಿಮೂರ ಕೈದಿಗಳು ಬಿಡುಗಡೆಯಾಗಿದ್ದರೂ ಮೈಸೂರು ಸರಕಾರವು ಇಸೂರ ಖಟ್ಲೆಯಲ್ಲಿ ಶಿಕ್ಷೆಗೆ ಗುರಿಯಾದವರನ್ನು ಈ ವರೆಗೆ ಬಿಡುಗಡೆ ಮಾಡದಿರುವುದರಿಂದ ಆ ಸರಕಾರದ ಧೋರಣೆಯ ಬಗ್ಗೆ ಈ ಸಭೆಗೆ ಅತೀವ ಅತೃಪ್ತಿಯುಂಟಾಗಿದೆ. ಅಲ್ಲದೆ ಜನರ ಚಲನವಲನಗಳ ಮೇಲೆ ವೈಯಕ್ತಿಕವಾಗಿ ಇಡಲಾದ ನಿರ್ಬಂಧ ಹಾಗೂ ಸಾರ್ವಜನಿಕರ ಸಭೆಯ ಕಾರ್ಯಕ್ರಮಗಳ ಮೇಲೆ ಇಡಲಾದ ನಿರ್ಬಂಧ ಮುಂತಾದುವುಗಳು ಇನ್ನೂ ಹಾಗೆಯೇ ಸಾಗಿರುವದನ್ನು ಈ ಸಭೆಯು ಕಟುವಾಗಿ ಖಂಡಿಸುತ್ತದೆ. ಸದ್ಯಕ್ಕೆ ದೇಶದಲ್ಲಿ ಆಗುತ್ತಿರುವ ತೀವ್ರ ಬದಲಾವಣೆಗಳನ್ನು ಪರೀಕ್ಷಿಸಿ ಯಾವತ್ತೂ ರಾಜಕೀಯ ಕೈದಿಗಳನ್ನು ಕೂಡಲೇ ಬಿಡುಗಡೆ ಮಾಡಬೇಕು ಹಾಗು ನಿರ್ಬಂಧಗಳನ್ನು ಕಿತ್ತುಹಾಕುವರೆಂದು ಈ ಸಭೆಯು ಆಶಿಸುತ್ತದೆ.

೫. ಅಧಿಕಾರಿಗಳ ಅತ್ಯಾಚಾರದ ವಿಚಾರಣೆ

೧೯೪೨ರ ಚಳವಳಿಯಲ್ಲಿ ಸರಕಾರೀ ಅಧಿಕಾರಿಗಳು ವಿಶೇಷತಃ ಪೋಲೀಸರು ಜನತೆಯ ಮೇಲೆ ಮಾಡಿದ ಜುಲುಮೆ ಹಾಗೂ ಅತ್ಯಾಚಾರಗಳ ಬಗ್ಗೆ ವಿಚಾರ ಮಾಡಿ ವರದಿಯನ್ನು ಒಪ್ಪಿಸಲು ಅಧಿಕಾರೇತರರ ಸಮಿತಿಗಳನ್ನು ನೇಮಿಸಬೇಕೆಂದು ಈ ಸಭೆಯು ಮುಂಬಾಯಿ, ಮದ್ರಾಸ್ ಸರಕಾರಗಳಿಗೂ ಮೈಸೂರು ಹೈದರಾಬಾದ್ ಹಾಗು ಕರ್ನಾಟಕದ ಇನ್ನಿತರ ಸರಕಾರಗಳಿಗೂ ಆಗ್ರಹಪಡಿಸುತ್ತದೆ.

೬. ಕಾಯದೇ ಮಂಡಲಗಳ ಕಾರ್ಯ

ಬ್ರಿಟಿಷ್ ಕರ್ನಾಟಕದ ಅಭಿವೃದ್ಧಿಗಾಗಿ ಕಾಯ್ದೇ ಮಂಡಲಗಳ ಪೂರ್ಣಲಾಭ ಪಡೆಯಲು ಮತ್ತು ಕಾಂಗ್ರೆಸ್ ಪೋಷಣೆಯನ್ನು ಸಂಪೂರ್ಣವಾಗಿ ಹಾಗೂ ತೀವ್ರವಾಗಿ ಕಾರ್ಯರೂಪದಲ್ಲಿ ತರಲು ಈ ಸಭೆಯು ಈ ಕೆಳಗಿನ ಉಪ ಸಮಿತಿಯನ್ನು ನೇಮಿಸುತ್ತದೆ. ಮತ್ತು ಈ ಸಮಿತಿಯವರು ಶಕ್ಯವಾದಷ್ಟು ಉತ್ತಮ ರೀತಿಯಲ್ಲಿ ಈ ಮೇಲಿನ ವಿಷಯಗಳನ್ನು ಕಾರ್ಯರೂಪದಲ್ಲಿ ತರಬೇಕೆಂದು ಆಜ್ಞಾಪಿಸುತ್ತದೆ.

ಈ ಉಪ ಸಮಿತಿಯಲ್ಲಿ (೧) ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಕಾರ್ಯಕಾರಿ ಮಂಡಲಿಯ ಎಲ್ಲಾ ಸದಸ್ಯರು; (೨) ಬ್ರಿಟಿಷ್ ಕರ್ನಾಟಕದ ಜಿಲ್ಲಾ ಕಾಂಗ್ರೆಸ್ ಕಮಿಟಿಗಳ ಅಧ್ಯಕ್ಷರು ಅಥವಾ ಕಾರ್ಯದರ್ಶಿಗಳು ಮಾತ್ರ. (೩) ಮುಂಬಾಯಿ ಹಾಗು ಮದ್ರಾಸ್ ಕರ್ನಾಟಕದಲ್ಲಿಯ ಕಾಯ್ದೆ ಮಂಡಲಗಳ ಕಾಂಗ್ರೆಸ್ ಸದಸ್ಯರು ಇರತಕ್ಕದ್ದು.

೭. ಬರಗಾಲ ಕಾರ್ಯ ಹಾಗೂ ಕೂಲಿಯ ದರ

ಕರ್ನಾಟಕದ ಬಳ್ಳಾರಿ, ಬೆಳಗಾವಿ, ಧಾರವಾಡ ಜಿಲ್ಲೆಗಳಲ್ಲಿ ಮೈಸೂರು ಮೊದಲಾದ ಅನೇಕ ಸಂಸ್ಥಾನಗಳಲ್ಲಿ ಆಯಾ ಸರಕಾರಗಳು ಬರಗಾಲ ಕ್ಷೇತ್ರವೆಂದು ಸಾರಿದ ಪ್ರದೇಶಗಳಲ್ಲಿ ಬರಗಾಲ ಕಾಮಗಿರಿಯನ್ನು ಪ್ರಾರಂಭಿಸುತ್ತೇವೆಂದು ಪ್ರಕಟಣೆ ಹೊರಡಿಸುತ್ತಾರೆಯೇ ಹೊರತು ಪ್ರತ್ಯಕ್ಷ ಕಾರ್ಯವು ಅನೇಕ ಕಡೆಗಳಲ್ಲಿ ಪ್ರಾರಂಭವಾಗಿರುವುದಿಲ್ಲ. ಆದ್ದರಿಂದ ಬರಗಾಲ ಪೀಡಿತರಿಗೆ ಬಹಳ ತೊಂದರೆಯಾಗಿದೆ. ಕೂಡಲೇ ಅಲ್ಲಲ್ಲಿ ಕಾರ್ಯ ಪ್ರಾರಂಭಿಸಿ ಪೀಡಿತರಿಗೆ ಪರಿಹಾರ ದೊರೆಯುವಂತೆ ಮಾಡಬೇಕಾಗಿ ಈ ಸಭೆಯು ಆಗ್ರಹಪೂರ್ವಕವಾಗಿ ಆಯಾ ಸರಕಾರಗಳಿಗೆ ಸೂಚಿಸುತ್ತದೆ.

ಪರಮಾವಧಿ ಕೂಲಿಯೆಂದು ಕೆಲವೆಡೆ ದಿನಕ್ಕೆ ೮ ಆಣೆಯಂತೆಯೂ ಮತ್ತು ಕನಿಷ್ಠ ಕೂಲಿಯೆಂದರೆ ನಾಲ್ಕಾಣೆಯಂತೆಯೂ ಕೊಡುತ್ತಿದ್ದಾರೆ. ಇದು ಈ ತುಟ್ಟಿ ಕಾಲದಲ್ಲಿ ಹೊಟ್ಟೆಗೆ ಸಾಲುವುದು ಸಾಧ್ಯವೇ ಇಲ್ಲ ಈ ಪರಿಸ್ಥಿತಿಯಲ್ಲಿ ಕನಿಷ್ಠ ಕೂಲಿಯನ್ನು ೮ ಆಣೆ ಮತ್ತು ಪರಮಾವಧಿ ಕೂಲಿಯನ್ನು ೧ ರೂಪಾಯಿಯಂತೆ ಹೆಚ್ಚಿಸಬೇಕಾಗಿ ಈ ಸಭೆಯು ಸೂಚಿಸುತ್ತದೆ.

ಹಣ ಕೊಟ್ಟರೂ ಎಷ್ಟೋ ಕಡೆಗೆ ಧಾನ್ಯ ದೊರಕಿಸುವುದು ಬಡವರಿಗೆ ದುಸ್ತರವಾಗುತ್ತದೆ. ಆದ್ದರಿಂದ ಧನದ ಬದಲು ಧಾನ್ಯ ರೂಪದಲ್ಲಿ ಕೂಲಿ ಕೊಡುವ ಯೋಜನೆ ಮಾಡಬೇಕೆಂದು ಈ ಸಭೆಯು ಸೂಚಿಸುತ್ತದೆ.

೮. ಹರಿಜನ ಕಾರ್ಯ

ಹರಿಜನ ಸಮಾಜದವರಿಗೆ ದೇವಾಲಯ ಬಹುದ ಅಂಗಡಿ ಹಾಗು ಇತರ ಸಾರ್ವಜ

USE
OUR GENUINE
EUCALYPTUS OIL
FOR ALL
ACHES & PAINS

FOR HEALTH
USE
SILVER KING
CASTOR OIL
LAKSHMI OIL MILLS,
COIMBATORE.

ಅನಾವಶ್ಯಕವಾಗಿ ಕೂಡಿಡಬಾರದು

• ಅನಾವಶ್ಯವಾಗಿ ಕೂಡಿಡುವುದು ಸ್ವಾರ್ಥತೆಯಾಗುವುದು. ಹೀಗೆ ಮಾಡುವುದು ಪದಾರ್ಥಗಳ ಅಭಾವಕ್ಕೂ ಬೆಲೆಗಳು ಜಾಸ್ತಿಯಾಗುವುದಕ್ಕೂ ಕಾರಣವಾಗುತ್ತದೆ. ಮುಖ್ಯವಾಗಿ ಗೃಹಕೃತ್ಯಕ್ಕೆ ನಿತ್ಯವೂ ಬೇಕಾದ ೫೦೧ ಸಾಬೂನಿನಂಥ ಅವಶ್ಯ ಪದಾರ್ಥವನ್ನು ಕೊಳ್ಳಲು ಸಾಮಾನ್ಯ ಜನರು ತೊಂದರೆ ಪಡುವರು.



೫೦೧ ಸಾಬೂನುಗಳು

ದಿ ತಾತಾ ಆಯಿಲ್ಸ್ ಕಂಪೆನಿ ಲಿಮಿಟೆಡ್.

ನಿಕ ಸ್ಥಳಗಳಲ್ಲಿ ನಿರಾತ್ಂಕೆವಾಗಿ ಪ್ರವೇಶ ದೊರೆಯಲು ಅಸ್ಪ್ರಶ್ಯತೆಯ ಕಲಂಕ ದೂರಮಾಡಲು ಸಾಧನವಾಗುವ ಶಾಸನ ವನ್ನು ಕೂಡಲೇ ಅಧಿಕಾರರೂಢವಾಗಿ ರುವ ಕಾಂಗ್ರೆಸ್ ಮಂತ್ರಿ ಮಂಡಲದವರು ಜಾರಿಯಲ್ಲಿ ತರಬೇಕೆಂದು ಸೂಚಿಸುತ್ತದ ಲ್ಲದೆ ಅದಕ್ಕಾಗಿ ಸಾಕಷ್ಟು ವಾತಾವರಣ ಹಾಗು ಸಾರ್ವಜನಿಕರ ಬೆಂಬಲ ದೊರೆಯ ಲನುಕೂಲವಾಗುವ ಕಾರ್ಯಕ್ರಮಗಳ ನ್ನು ಪ್ರಚಾರ ಮೂಲಕ ತೀವ್ರವೇ ಕೈಕೊ ಳ್ಳುತ್ತದೆ.

೯. ತೋಟದ ಕೂಲಿಗಾರರ ಶೋಚನೀಯ ಸ್ಥಿತಿ

ಮೈಸೂರು, ನೀಲ್ಗಿರಿ, ವಾಯನಾಡು ಹಾಗು ಕೊಡಗುಗಳಲ್ಲಿ ಚಹ, ಕಾಫಿ, ರಬ್ಬರ ತೋಟಗಳಲ್ಲಿ ಕೆಲಸ ಮಾಡುತ್ತಿ ರುವ ಕೂಲಿಗಾರರ ಆರ್ಥಿಕ, ಸಾಮಾಜಿಕ ಸ್ಥಿತಿಯು ಅತ್ಯಂತ ಶೋಚನೀಯವೂ ದಯಾರ್ದ್ರವೂ ಇರುವುದು. ಅವರ ಪರಿ ಸ್ಥಿತಿಯನ್ನು ಪರಿಶೀಲಿಸಿ ಈ ಕಮಿಟಿಗೆ ೪ ತಿಂಗಳಲ್ಲಿ ವರದಿ ಮಾಡಲು ಈ ಸಭೆಯು ಈ ಕೆಳಗಿನ ಉಪ ಸಮಿತಿಯನ್ನು ನೇಮಿಸು ತ್ತದೆ ಮತ್ತು ೧೯೪೨ನೆಯ ಇಸವಿಯ ಕಾರ್ಮಿಕ ಶಾಸನದಂತೆ ಸಂಘಗಳನ್ನು ಸ್ಥಾಪಿಸಲು ಅವಕಾಶ ಕೊಡಬೇಕೆಂಬ ಬಗ್ಗೆ ಮೈಸೂರು ಸರಕಾರದೊಡನೆ ಪತ್ರ ವ್ಯವಹಾರ ನಡೆಸಲು ಈ ಸಮಿತಿಗೆ ಅಧಿಕಾ ರ ಕೊಡುತ್ತದೆ.

ಸದಸ್ಯರು:— (೧) ಶ್ರೀ। ಪಿ. ಎಂ ಪುನಾಚ್ಚಾ, (೨) ಶ್ರೀ॥ ಎಚ್. ಕೆ ವೀರ ಣ್ಣ ಗೌಡ, (೩) ಶ್ರೀ॥ ಕೆ ಕೆ. ಪಿ ರಾಮ ಪೋದುವಾಳ, (೪) ಶ್ರೀಮತಿ ಕಮಲಾದೇವಿ (ಕಾರ್ಯವಾಹಕರು).

ಚೆನ್ನಬಸಪ್ಪ ಅಂಬಲಿ,
ಪ್ರ. ಕಾರ್ಯದರ್ಶಿ.

೮೮-೫-೪೬, ಹುಬ್ಬಳ್ಳಿ.

——

ಮಂಗಳೂರು

ಸೈಂಟ್ ಎಲೋಶಿಯಸ್ ಕಾಲೇಜ್ ಇಂಟರ್ ಪರೀಕ್ಷೆಯ ಫಲಿತಾಂಶ

ಎಲ್ಲ ಭಾಗಗಳಿಗೂ ಕುಳಿತ ೧೬೯ ರಲ್ಲಿ ಪಾಸು I ಕ್ಲಾಸ್ ೬೨, II ಕ್ಲಾಸ್ ೬೮ ಒಟ್ಟು ೧೩೦; ಸೇಕಡಾ ೭೬. ೯; ಭಾಗ I ಇಂಗ್ಲಿಷಿನ ೧೭೧ರಲ್ಲಿ ೧೫೫ ಪಾಸು; ಸೇ. ೯೦. ೬. ಭಾಗ II ಎಲ್ಲಾ ಭಾಷೆಗಳಲ್ಲಿನ ೧೭೧ರಲ್ಲಿ ೧೬೨ ಪಾಸು; ಸೇ. ೯೪. ೭; ಇದರಲ್ಲಿ ಕನ್ನಡ ೧೨೦ರಲ್ಲಿ ೧೧೯ ಪಾಸ್; ಸೇ. ೯೯. ೨; ಮಲಯಾಳ ೧೪ರಲ್ಲಿ ೧೧ ಪಾಸು; ಸೇ ೭೮. ೬; ಸಂಸ್ಕೃತ ೧೩ರಲ್ಲಿ ೧೧ ಪಾಸು, ಸೇ. ೪೪. ೬; ಹಿಂದೀ ೧೭ರಲ್ಲಿ ೧೪ ಪಾಸು; ಸೇ ೮೨. ೩; ಫ್ರೆಂಚ್ ೭ರಲ್ಲಿ ೭; ಸೇಕಡಕ್ಕೆ ಸೇಕಡಾ; ಭಾಗ III ಐಚ್ಛಿಕ ೧೬೯ರಲ್ಲಿ ೧೪೦ ಪಾಸು ಸೇ॥ ೮೨. ೪.

ರೈಲ್ವೆ ಮುಷ್ಕರ ಮುಗಿಯಿತು

ಒಂದು ದಿನದ ಮುಷ್ಕರ ಕಳೆದ ಮಂಗ ಳವಾರ ಬೆಳಗ್ಗೆ ಗಂಟೆ ೭ಕ್ಕೆ ಮುಗಿಯಿತು. ಈ ಮುಷ್ಕರಕ್ಕೆ ದೊಡ್ಡ ಸಂಬಳದ ರೈಲ್ವೆ ಶಾಖಾ ಆಫೀಸರರು, ಗುಮಾಸ್ತರು ಮೊದ ಲಾದವರು ಸೇರಲಿಲ್ಲ; ಪ್ಯೊಂಟ್ಸ್‌ಮೆನ್, ಲೋಕೋ ಶೆಡ್ ಕೆಲಸಗಾರರು,—ಮೊದ ಲಾದ ಕಡಿಮೆ ಸಂಬಳದವರು ಮಾತ್ರ ಸೇರಿ ದ್ದರು. ಈ ಮುಷ್ಕರ ಈ ಜಿಲ್ಲೆಯಲ್ಲಿಯೂ ಇತರ ಕೆಲವು ಜಿಲ್ಲೆಗಳಲ್ಲಿಯೂ ನಡೆದಿತ್ತು. ಇದಕ್ಕೆ ಕಾರಣ ಎಲ್ಲಪುರಂನಲ್ಲಿ ಶಾಖಾ ಕಾರ್ಯದರ್ಶಿಯನ್ನೂ ಮೆಥುರೆಯಲ್ಲಿ ಕೆಲ ರೈಲ್ವೆ ಕೆಲಸಗಾರರನ್ನೂ ಕೆಲಸದಿಂದ ತೆಗೆದು ಹಾಕಿದುದೇ.

ಸೋಮವಾರ ಎಲ್ಲ ಟ್ರೈನುಗಳೂ ಸ್ವಲ್ಪ ಎಳಂಬವಾಗಿ ಮಂಗಳೂರಿಂದ ಹೊರಟವೆ; ಎಳಂಬವಾಗಿ ಇಲ್ಲಿಗೆ ತಲುಪಿವೆ. ಟ್ರೈನ್ ಚಲಾವಣೆ ಕೆಲಸದಲ್ಲಿ ಪೋಲೀಸರು, ಇಂಜಿ ನ್ ಡ್ರೈವರ್, ಪಿ. ಡಬ್ಲ್ಯು. ಡಿ ಇನಸ್ಪೆ ಕ್ಟರರು, ರೈಲ್ವೆ ಅಸಿ॥ ಇಂಜಿನಿಯರರೇ ಮೊ ದಲಾದವರು ಸಹಾಯ ಮಾಡಿದರು.

ಅಂದು ಸಂಜೆ ಮೈದಾನಿನಲ್ಲಿ ರೈಲ್ವೆ ಕೆಳ ತರಗತಿ ನವುಕರ ಮತ್ತು ಇತರರ ಒಂದು ಸಭೆ ಸೇರಿದಾಗ ಎಸ್. ಐ. ಆರ್ ಲೇಬರ್ ಯೂನಿಯನಿನ ಮಂಗಳೂರು ಶಾಖಾ ಕಾರ್ಯದರ್ಶಿ ಶ್ರೀ। ರಾಜ ಮಾ ಣಿಕಂ ಅವರು ಮಾತಾಡಿದರು. ಶ್ರೀ। ಬಿ. ಎ ಕಕ್ಕಿಲ್ಲಾಯರು ಅಂದಿನ ಅಧ್ಯಕ್ಷರು.

ಮುಷ್ಕರ ಹೂಡಿದ್ದ ರೈಲ್ವೆ ಕೆಲಸಗಾರ ರೆಲ್ಲ ತ್ರಿಚಿ, ಮಲಬಾರ್ ಮೊದಲಾದ ಎಲ್ಲ ಕಡೆಗಳಲ್ಲಿಯೂ ತಿರುಗಿ ಕೆಲಸಕ್ಕೆ ಬಂದು ಸೇರಿರುವರು.

ರೈ॥ ಇಂಜಿನ್ ಕಂಬಿ ತಪ್ಪಿತ್ತು

ಮಂಗಳೂರಲ್ಲಿ ಕಳೆದ ತಾ. ೨೦ನೇ ರಾತ್ರಿ ರೈಲ್ವೆ ಇಂಜಿನ್ ಒಂದು ಕಂಬಿ ತಪ್ಪಿ ಹೊರಳಿದ ಕಾರಣ ಮರುದಿನದ ಮದ್ರಾಸ್ ಮೈಲ್ ಇಲ್ಲಿಂದ ೪॥ ಗಂಟೆಗಳಷ್ಟು ಎಳಂ ಬಿಸಿ ಹೊರಟಿತು. ಅಂದಿನ ಇತರ ರೈಲ್ ಗಾಡಿಗಳ ಚಲಾವಣೆಯೂ ಹೊತ್ತು ಮೀರಿ ನಡೆಯಬೇಕಾಯಿತು. ಈಗ ಮುಷ್ಕರ ಮುಗಿದು ರೈಲ್ವೆ ಗಾಡಿಗಳು ಸರಾಗವಾಗಿ ಓಡಾಡುತ್ತಿವೆ.

ಶ್ರೀ। ಪಿ. ಕೃಷ್ಣ ಪಿಳ್ಳೆಯವರ ಮೇಲಿನ ನಿರ್ಬಂಧ

ಮಲಬಾರಿಗೆ ಹೋಗ ಕೂಡದೆಂದು ಮೇಲ್ಕಂಡ ಮಹನೀಯರ (ಇವರು ಮ ದ್ರಾಸ್ ಪ್ರಾ॥ ಟ್ರೇಡ್ ಯೂನಿಯನ್ ಕಾಂಗ್ರೆಸಿನ ಉಪಾಧ್ಯಕ್ಷರು) ಮೇಲೆ ಹಿಂದೆ ಹೊರಿಸಲಾಗಿದ್ದ ನಿರ್ಬಂಧಾಜ್ಞೆಯ ನ್ನು ಕಾಂಗ್ರೆಸ್ ಸರಕಾರದವರು ಈಗ ರದ್ದು ಮಾಡಿದ್ದಾರೆ.

ಸಕ್ಕರೆಗೆ "ಕಟ್"

ಈ ನಗರದ ಹೊಟೆಲ್‌ಗಳವರಿಗೆ, ಎಸ್ಪುಲ್‌ನಲ್ಲಿ ಹೆಚ್ಚಿಗೆ ಸಕ್ಕರೆ ಕೊಟ್ಟದ್ದು ಅನಂತರ ಹಾಗೆ ಹೆಚ್ಚಿಗೆ ಕೊಟ್ಟ ಸಕ್ಕರೆ ಯ ಅಂಶವನ್ನು ಮೇ ತಿಂಗಳಲ್ಲಿ ಕಡಿಮೆ ಮಾಡಲಾಗಿತ್ತು. ಆದರೆ ಸಕ್ಕರೆಯನ್ನು ಈ ತಿಂಗಳಲ್ಲಿ ಕಡಿಮೆ ಮಾಡಬೇಕಿಲ್ಲವೆಂದು ಈ ಗ ನಿರ್ಧರಿಸಲಾಗಿದೆ. ಹಾಗೆ ಹೊಟೆಲ್‌ಗಳ ನರಿಗೆ ಹಿಂದಿನಷ್ಟೇ ಸಕ್ಕರೆ ದೊರೆವಂತಾಗಿ ದೆ. ಕಟ್ ಇಲ್ಲ. ಮುಂದಿನ ತಿಂಗಳಲ್ಲಿ ಮಾತ್ರ ಸಕ್ಕರೆಗೆ "ಕಟ್" ಇದೆಯಾಗಿ ವಾರ್ತೆ.

ಹರಿಜನ ಲೇಬರ್ ಲೀಗ್

ಈ ಲೀಗಿನ ಮಹಾ ಸಭೆಯೊಂದು ಕಳೆ ದ ತಾ. ೨೦ರಲ್ಲಿ ರಘುನಾಥಯ್ಯ ಮೆಮೋ ರಿಯಲ್ ಹಾಲ್‌ನಲ್ಲಿ ಡಾ. ಎಫ್. ಎಚ್. ವೊಡೆಯರರ ಅಧ್ಯಕ್ಷತೆಯಲ್ಲಿ ಜರುಗಿದಾಗ ಶ್ರೀ। ಡಿ. ಕದಿರಪ್ಪ ಎಂ. ಎಲ್. ಏ (ಅನಂ ತಪುರದ ಹರಿಜನ ಪ್ರತಿನಿಧಿ) ಅವರು "ಕಾಂ ಗ್ರೆಸೂ ಹರಿಜನರೂ" ಎಂಬ ಕುರಿತು ಮಾ ತಾಡಿದರು. ಶ್ರೀಗಳಾದ ಎಸ್. ಜಿ. ಸಾಲೆ ನ್ನರೂ, ಕೆ. ಶಂಕರ್‌ಭೂತಪ್ಪ ಅವರೂ ಭಾ ಷಣಮಾಡಿದರು. ಲೀಗಿನ ಕಾರ್ಯದರ್ಶಿ ಶ್ರೀ. ಕೆ. ಈಶ್ವರ ಎಂ. ಎಲ್. ಏ ಅವರು ವಂದಿಸಿದರು.

ಶುದ್ಧೀಕರಣ

ತ್ರಿಕರಪುರದಲ್ಲಿ ಕ॥ ಶೆ॥ ಜಾತೀಯ ಕ್ಷೇ ಮಚಿಂತನೆಯ ಸಂಘದ ಆಶ್ರಯದಲ್ಲಿ ಶ್ರೀ। ಡಿ. ಕದಿರಪ್ಪ ಎಂ. ಎಲ್. ಏ ಅವರ ಅಧ್ಯ ಕ್ಷತೆಯಲ್ಲಿ ೫೦ ಮಂದಿ ರೋಮನ್ ಕೆಥೊ ಲಿಕರಿಗೆ ಶುದ್ಧೀಕರಣ ದೀಕ್ಷೆ ಕೊಟ್ಟು ಹಿಂದೂ ಧರ್ಮಕ್ಕೆ ಸೇರಿಸಿಕೊಳ್ಳಲಾಯಿ ತು. ಈ ಸಂಸ್ಕಾರದ ಪುರೋಹಿತರು ಶ್ರೀ ಬಿ. ಮೋ. ತಿಂಗಳಾಯರು. ಈ ಸ ದಲ್ಲಿ ಈ ದ. ಕ ಜಿಲ್ಲಾ ಸಂಘದ ಕಾ ಶ್ರೀ। ಎಸ್. ಜಿ. ಸಾಲೆನ್ನ ಅಲ್ಲದೆ ಅನಂ ಪುರ ಶೆ॥ ಜಾತೀಯ ಫೆಡರೇಶನಿನ ಕಾರ್ಯ ದರ್ಶಿ ಶ್ರೀ। ಭೂತಪ್ಪ ಇವರು ಮಾತಾಡಿ ದರು. ಕಾರ್ಯದರ್ಶಿ ಶ್ರೀ. ಜಿ. ವಾಮನ (ಮು॥ ಕೌನ್ಸಿಲರ್) ಇವರು ವಂದಿಸಿದರು.

ಜಲಕ್ರೀಡೆ ಮತ್ತು ದೋಣಿಗಳ ಪಂದ್ಯಾಟ

ಇದೇ ತಾ. ೨೬ರಲ್ಲಿ (ಸರಕಾರದ ರಿಕ್ರಿ ಯೇಶನ್ ಯೋಜನೆಯ ವೇಳೆಗೆ) ಕಾಸರ ಗೋಡು ರೈ॥ ಸ್ಪೆ॥ ಬಳಿಯ ಹೊಳೆಯಲ್ಲಿ ಸಂಜೆ ಗಂಟೆ ೪ರಿಂದ ಜಲಕ್ರೀಡೆ ಮತ್ತು ದೋಣಿಗಳ ಪಂದ್ಯಾಟ ನಡೆಯುವುದು. ನಮ್ಮ ಕಲೆಕ್ಟರ್ ಶ್ರೀ. ಎಸ್. ಭೂತಲಿಂಗಂ ಐ. ಬಿ. ಇ. ಐ. ಸಿ. ಎಸ್. ಅವರು ಅಂದಿನ ಅಧ್ಯಕ್ಷತೆ ವಹಿಸಿ ಬಹುಮಾನ ಹಂಚು ವರು.

ವಾರ್ಷಿಕೋತ್ಸವ

ಇಲ್ಲಿಯ ಮೇಲ್ಕಂಡ ಮೋಗವೀರ ವಾ ಜ್ಯಾಭ್ಯುದಯ ಸಂಘದ ಮತ್ತು ಅದರ ಆಶ್ರಯ ದಲ್ಲಿ ನಡೆದು ಬರುತ್ತಿರುವ ರಾಷ್ಟ್ರೀಯ ಧರ್ಮಾರ್ಥ ರಾತ್ರಿ ಶಾಲೆಯ ವಾರ್ಷಿ ಕೋತ್ಸವವು ಇದೇ ಮೇ ತಾ. ೨೬ನೇ ಸರಜೆ ಬೊಕ್ಕಪಟ್ಣ ಮು॥ ಹಾ॥ ಎ॥ ಶಾಲೆ ಯಲ್ಲಿ ಫಿಶರೀಸ್ ಅ॥ ಡೈರೆಕ್ಟರ್ ಶ್ರೀ। ಎನ್. ಡಿ ಕೆಮ್ಮೂರ್ ಅವರ ಅಧ್ಯಕ್ಷತೆ ಯಲ್ಲಿ ಜರುಗುವುದು.

——



ಬೊರಟಾಲ್ಕ್

ನಿದೋಷ ಚರ್ಮಕ್ಕೆ ವೈದ್ಯರ ಸಲಹೆ

ಬೊರಾಟಾಲ್ಕ್‌ನ ತಯಾರಿಕೆಯಲ್ಲಿ ಉಪಯೋಗಿಸುತ್ತಿ ರುವ ಹಲವಾರು ದ್ರವ್ಯಗಳ ಔಷಧದ ಗುಣಗಳಿಂದ ಅದು ಚರ್ಮವನ್ನು ಕಾಂತಿಯುಕ್ತವಾಗಿ ಮಾಡುವಲ್ಲಿ ಆದರ್ಶಪ್ರಾ ಯವಾದ ಶೃಂಗಾರ ಸಾಮಾಗ್ರಿಯಾಗಿರುತ್ತದೆ. ಮೃದು ಚರ್ಮಕ್ಕೆ ಸುರಕ್ಷಿತವೆಂದು ಶಿಫಾರಸು ಮಾಡಲಾಗಿದೆ.

ಏಜಂಟರು:—

ವಿ. ಸಿ. ರಾಮಲಿಂಗಂ ಎರೆಡ್ ಸನ್ಸ್,
2/422 ಏಂಟ್ ಸ್ಟ್ರೀಟ್, ಮದ್ರಾಸು.

ತಯಾರಕರು:—

ನೇಶನಲ್ ಟ್ರೇಡಿಂಗ್ ಕೊ., ಬೊಂಬಯಿ.

Printed & Published by M. Baburaya Pai, B. A., at the Mangalore Press, Car-Street, Mangalore. Editor: Hurli Bhima Rao